# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 414 |
| ಉತ್ತರಿಸಬೇಕಾದ ದಿನಾಂಕ | : | 10.12.2025 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಎಲ್ಲಾ ವಸತಿ ಯೋಜನೆಗಳ ಫಲಾನುಭವಿಗಳಿಗೆ ಕಾಲ ಕಾಲಕ್ಕೆ ಸಹಾಯಧನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮವೇನು; | ವಿವಿಧ ವಸತಿ ಯೋಜನೆಗಳಡಿ ಆಯ್ಕೆಮಾಡಲಾದ ಅರ್ಹ ಫಲಾನುಭವಿಗಳು ತಾವೇ ನಿರ್ಮಾಣ ಮಾಡಿಕೊಳ್ಳುತ್ತಿರುವ ವಿವಿಧ ಹಂತದಲ್ಲಿರುವ ಮನೆಗಳಿಗೆ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗನುಸಾರ ಮತ್ತು ಅನುದಾನದ ಲಭ್ಯತೆಗೆ ಅನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಖಜಾನೆಯ ತಂತ್ರಾಂಶದ ಮೂಲಕ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>ಪ್ರಸ್ತುತ ಕೇಂದ್ರ ಸರ್ಕಾರದ ವಸತಿ ಯೋಜನೆಗಳನ್ನು ಹೊರತುಪಡಿಸಿ ಉಳಿದ ಯಾವುದೇ ವಸತಿ ಯೋಜನೆಗಳಡಿ ಅನುದಾನ ಬಿಡುಗಡೆ ಮಾಡಲು ಬಾಕಿ ಇರುವುದಿಲ್ಲ. 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಅಕ್ಟೋಬರ್-2025ರ ಅಂತ್ಯಕ್ಕೆ ರೂ.1324.26 ಕೋಟಿಗಳ ಅನುದಾನವನ್ನು ಅರ್ಹ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ.<br><br>2025-26ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ ಧಾರವಾಡ ಜಿಲ್ಲೆಗೆ ರೂ.33.95 ಕೋಟಿ, ಗದಗ ಜಿಲ್ಲೆಗೆ ರೂ.34.21ಕೋಟಿ ಮತ್ತು ಹಾವೇರಿ ಜಿಲ್ಲೆಯ ಫಲಾನುಭವಿಗಳಿಗೆ ರೂ.37.29 ಕೋಟಿ ಒಟ್ಟು ರೂ.105.45 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಯೋಜನಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.<br>ಮುಂದುವರೆದು, ಕೇಂದ್ರ ಪುರಸ್ಕೃತ ಯೋಜನೆಗಳಾದ ಪ್ರಧಾನ ಮಂತ್ರಿ ಆವಾಸ್ (ನಗರ) ಹಾಗೂ ಇದಕ್ಕೆ ಸಂಯೋಜನೆಗೊಂಡ ರಾಜ್ಯ ಸರ್ಕಾರದ ಯೋಜನೆಗಳಾದ ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಾ. ಬಿ ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ) ಗಳಡಿ ಮತ್ತು ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಯೋಜನೆಗಳನ್ನು ಕೇಂದ್ರ ಸರ್ಕಾರವು SNA SPARSH Module ಮುಖಾಂತರ ಅನುಷ್ಠಾನ ಮಾಡಿ ಅನುದಾನ ಬಿಡುಗಡೆ ಮಾಡಲು ತಿಳಿಸಿದ್ದು, ಅದರಂತೆ ಸದರಿ ಯೋಜನೆಯ BLC ಘಟಕದಡಿ ಫಲಾನುಭವಿಗಳಿಗೆ SNA SPARSH Module ಮುಖಾಂತರವೇ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಬೇಕಿರುತ್ತದೆ. ಪ್ರಸ್ತುತ SNA SPARSH ಗೆ ಖಜಾನೆಯಲ್ಲಿ K2 ಮೂಲಕ DBT Module ತಂತ್ರಾಂಶದ Integration ಕಾರ್ಯ ಪ್ರಗತಿಯಲ್ಲಿದ್ದು, ತಂತ್ರಾಂಶ ತಯಾರಾದ ನಂತರ ಅರ್ಹ ಫಲಾನುಭವಿಗಳಿಗೆ ಮನೆಗಳ ಭೌತಿಕ ಪ್ರಗತಿಯನ್ನಾಧರಿಸಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. |

| | | |
|---|---|---|
| ಆ) | ಗ್ರಾಮೀಣ ಪ್ರದೇಶಗಳಲ್ಲಿ ಮನೆ ನಿರ್ಮಾಣ ಮಾಡಲು ಬೇಕಾಗುವ ಎಲ್ಲಾ ಕಚ್ಚಾ ವಸ್ತುಗಳ ಬೆಲೆ ದುಬಾರಿಯಾಗಿದ್ದು, ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು? | ವಿವಿಧ ವಸತಿ ಯೋಜನೆಗಳಡಿ ನೀಡಲಾಗುತ್ತಿರುವ ಸಹಾಯಧನ ಹೆಚ್ಚಿಸುವ, ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ |

ಸಂಖ್ಯೆ: ವಇ 465 ಹೆಚ್‌ಎಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ -1

**ವಿವಿಧ ವಸತಿ ಯೋಜನೆಗಳಡಿಯಲ್ಲಿ 2025-26ನೇ ಸಾಲಿನಲ್ಲಿ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ವಸತಿ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ**

| ಕ್ರ ಸಂ | ಜಿಲ್ಲೆ | ಯೋಜನೆ | ಮೊತ್ತ (ಕೋಟಿಗಳಲ್ಲಿ) |
|---|---|---|---|
| 1 | ಧಾರವಾಡ | ಬಸವ ವಸತಿ ಯೋಜನೆ | 4.29 |
| | | ಡಿ ದೇವರಾಜ ಅರಸು ವಸತಿ ಯೋಜನೆ | 0.17 |
| | | ಡಾ ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ) | 1.08 |
| | | ಡಾ ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ) | 0.14 |
| | | PMAY –Grameen | 28.06 |
| | | PMAY –Urban | 0.00 |
| | | ವಾಜಪೇಯಿ ನಗರ ವಸತಿ ಯೋಜನೆ | 0.21 |
| | | **ಧಾರವಾಡ ಜಿಲ್ಲೆಯ ಒಟ್ಟು ಮೊತ್ತ** | **33.95** |
| 2 | ಗದಗ | ಬಸವ ವಸತಿ ಯೋಜನೆ | 6.29 |
| | | ಡಿ ದೇವರಾಜ ಅರಸು ವಸತಿ ಯೋಜನೆ | 0.13 |
| | | ಡಾ ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ) | 3.97 |
| | | ಡಾ ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ) | 0.19 |
| | | PMAY –Grameen | 23.27 |
| | | PMAY –Urban | 0.00 |
| | | ವಾಜಪೇಯಿ ನಗರ ವಸತಿ ಯೋಜನೆ | 0.35 |
| | | **ಗದಗ ಜಿಲ್ಲೆಯ ಒಟ್ಟು ಮೊತ್ತ** | **34.21** |
| 3 | ಹಾವೇರಿ | ಬಸವ ವಸತಿ ಯೋಜನೆ | 15.42 |
| | | ಡಿ ದೇವರಾಜ ಅರಸು ವಸತಿ ಯೋಜನೆ | 0.64 |
| | | ಡಾ ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ) | 2.28 |
| | | ಡಾ ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ) | 0.08 |
| | | PMAY –Grameen | 18.48 |
| | | PMAY –Urban | 0.00 |
| | | ವಾಜಪೇಯಿ ನಗರ ವಸತಿ ಯೋಜನೆ | 0.40 |
| | | **ಗದಗ ಜಿಲ್ಲೆಯ ಒಟ್ಟು ಮೊತ್ತ** | **37.29** |

| | |
|---|---|
| **ಎಲ್ಲಾ ಒಟ್ಟು ಮೊತ್ತ** | **105.45** |